**ಸಿ.ಸಿ.ನಂ.: 29/2023**

ಪಿ.ಡಬ್ಲ್ಯೂ: 1

(ಇಂದು ದಿನಾಂಕಃ **23–02–2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು –ಆರೋಪಿ ಪರ ಶ್ರೀಮತಿ. ಎಸ್.ಡಿ.ಎನ್. ವಕೀಲರಿಂದ**

1. ಆರೋಪಿತನು ನಮ್ಮ ಫಿರ್ಯಾದಿ ಸಂಸ್ಥೆಗೆ ದಿನಾಂಕಃ 20/04/2018 ಇರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದ್ರಿ ದಿನಾಂಕದಂದು ಜಾಮೀನುದಾರರು ಹಾಗೂ ಸಾಲಗಾರರು ನಮ್ಮ ಫಿರ್ಯಾದಿ ಸಂಸ್ಥೆಗೆ ಬಂದಿರುತ್ತಾರೆ. ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿದ 40 ದಿನಗಳ ನಂತರ ಆರೋಪಿತನಿಗೆ ಸಾಲವನ್ನು ಮಂಜೂರಾಗಿರುತ್ತದೆ. ಆರೋಪಿತನು ನೀಡಿದ ಸಾಲದ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಡಿಸಿರುತ್ತೇವೆ. ನಾನು ಪ್ರಧಾನ ಕವೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿಯೇ ಸಾಲ ಮಂಜೂರಾಗಿರುತ್ತದೆ.

2. ಆರೋಪಿತನಿಗೆ ಯಾವ ದಿನಾಂಕದಂದು ಸಾಲ ಮಂಜೂರಾಗಿದೆ ಎಂದು ನನಗೆ ಇವತ್ತು ನನಪಿಗೆ ಬರುತ್ತಿಲ್ಲ. ನಮ್ಮ ಫಿರ್ಯಾದಿ ಸಂಸ್ಥೆಯ ಆಡಳಿತ ಮಂಡಳಿಯ ಸಭೆಯು ದಿನಾಂಕಃ 01/06/2018 ರಂದು ನಡೆದಿರುತ್ತದೆ. ನಾವು ಈ ಪ್ರಕರಣದ ಸಾಲದ ಖಾತೆಯ ಉತಾರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಆರೋಪಿತನು ಸಾಲವನ್ನು ಪಡೆದುಕೊಂಡ ನಂತರದಲ್ಲಿ ರೂ.1 ಲಕ್ಷದ 71 ಸಾವಿರ ರೂಪಾಯಿಯನ್ನು ಮರು ಪಾವತಿ ಮಾಡಿರುತ್ತಾನೆ.

**ಸಿ.ಸಿ.ನಂ.: 29/2023**

ಪಿ.ಡಬ್ಲ್ಯೂ: 1

3. ನಿಪಿ2 ರಲ್ಲಿರುವ ಮೊತ್ತವು ದಿನಾಂಕಃ 10/11/2022 ರಂದು ರೂ.2,69,693–00 ಗಳು ಆರೋಪಿತನು ನಮಗೆ ಕೊಡಲು ಬಾಕಿ ಇದೆ ಎಂದು ನಮೂದು ಇರುತ್ತದೆ. ನಿಪಿ 2 ನ್ನು ಆರೊಪಿತನು 284693–00 ಕ್ಕೆ ನೀಡಿರುತ್ತಾನೆ. ದಿನಾಂಕಃ 10/11/2022 ರಂದು ಆರೋಪಿತನು ನಿಪಿ2 ರಲ್ಲಿ ನಮೂದು ಇದ್ದ ಹಣವನ್ನು ನೀಡಲು ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ರ ರಲ್ಲಿ ನಮೂದು ಇರುವ ಹಣ ಹಾಗೂ ನಮ್ಮ ಫಿರ್ಯಾದಿಯಲ್ಲಿ ನಮೂದು ಇರುವ ಹಣ ಆರೋಪಿತನು ನಮಗೆ ಕೊಡಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಭಾಗ ಪ್ರ.ದ.ನ್ಯಾ.ದಂ. ಕುಮಟಾ